MAY 16, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಕರ್ನಾಟಕದಲ್ಲಿ, 45 ಸಾವಿರ ಕೋಟಿ ರೂಪಾಯಿ, ರೇಲ್ವೆ ಯೋಜನೆಗಳು, ಕಳೆದೊಂದು ದಶಕದಲ್ಲಿ, ಕೇಂದ್ರದಿಂದ ಕಾರ್ಯಗತ.**
- **ದೊಡ್ಡಬಳ್ಳಾಪುರದ, ತೂಬಗೆರೆಯ ವಿಶಿಷ್ಟ ಹಲಸು ತಳಿಗಳಿಗೆ, ಹಕ್ಕು ಸ್ವಾಮ್ಯ ಪ್ರಾಪ್ತಿ.**
- **‘ಆಪರೇ ’ನ್ ಸಿಂಧೂರ್’; ಭಾರತೀಯ ಸೇನಾ ಪಡೆಗಳನ್ನು ಅಭಿನಂದಿಸಲು, ‘ತಿರಂಗಾ ಯಾತ್ರೆ’.**
- **ಧಾರವಾಡ ಘರಾಣೆಯ, ಸಿತಾರ ನವಾಜ್, ಅಬ್ದುಲ್ ಕರೀಮ್ ಖಾನ್ ಸಂಸ್ಮರಣೆ; ಇಂದಿನಿಂದ ‘ಪರಂಪರಾ ಸಂಗೀತೋತ್ಸವ’.**

<><><>

**ಈಗ ವಾರ್ತೆಗಳ ವಿವರ**

<><><>

**ದೇಶದ ಪ್ರತಿ ಹಳ್ಳಿಗೂ, ರೈಲು ಸಂಪರ್ಕ ಕಲ್ಪಿಸುವ, ಸಂಕಲ್ಪ ಕೇಂದ್ರ ಸರ್ಕಾರ ಹೊಂದಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ, 7 ಲಕ್ಷ ಕೋಟಿ ರೂಪಾಯಿಗೂ ಅಧಿಕ, ಹಳೆಯ ರೇಲ್ವೆ ಯೋಜನೆಗಳನ್ನು, ಕಾರ್ಯಗತ ಗೊಳಿಸಿದ್ದಾರೆ ಎಂದು, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆಯ, ಕು ್ಟಗಿ ರೈಲು ನಿಲ್ದಾಣದಲ್ಲಿ, ನೈಋತ್ಯ ರೇಲ್ವೆ ವಿಭಾಗದ, ಗದಗ ಕು ್ಟಗಿ ಹೊಸ ರೈಲು ಮಾರ್ಗ ಹಾಗೂ ಪ್ರಯಾಣಿಕರ ರೈಲಿಗೆ ಚಾಲನೆ ನೀಡಿ, ಮಾತನಾಡಿದರು. ಕಳೆದ ಹತ್ತು ವ ್ಷಗಳಲ್ಲಿ, ಅಂದಾಜು 45 ಸಾವಿರ ಕೋಟಿ ರೂಪಾಯಿ ರೇಲ್ವೆ ಯೋಜನೆಗಳನ್ನು, ಕರ್ನಾಟಕದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಕಳೆದ 10 ವರ್ಷಗಳಲ್ಲಿ, 5 ಲಕ್ಷ ಉದ್ಯೋಗಗಳನ್ನು ಒದಗಿಸಲಾಗಿದೆ. ‘ವಂದೇ ಭಾರತ’, 50 ವಾತಾನುಕೂಲಿ, ಸ್ಲೀಪರ್ ಕೋಚ್ ರೈಲುಗಳನ್ನು, ಮುಂಬರುವ ಒಂದೂವರೆ ತಿಂಗಳಲ್ಲಿ, ದೇಶಾದ್ಯಂತ ಬಿಡುಗಡೆ ಗೊಳಿಸಲಾಗುವುದು, ಎಂದರು.**

<><><>

ಆಲಮಟ್ಟಿ, ಯಾದಗಿರಿ ಮಧ್ಯದ 162 ಕಿಲೋ ಮೀಟರ್ ಉದ್ದದ, ನೂತನ ರೈಲು ಮಾರ್ಗದ, ಅಂತಿಮ ಸಮೀಕ್ಷೆಗೆ, ರೇಲ್ವೆ ಇಲಾಖೆ ಆದೇಶಿಸಿದೆ ಎಂದು, ರಾಯಚೂರು ಸಂಸದ ಜಿ.ಕುಮಾರ ನಾಯಕ, ತಿಳಿಸಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ತೂಬಗೆರೆ ಭಾಗದ ವಿಶಿಷ್ಟ ಹಲಸು ತಳಿಗಳಿಗೆ, ಕೇಂದ್ರ ತೋಟಗಾರಿಕೆ ಇಲಾಖೆ, 'ಸಸ್ಯ ಪ್ರಭೇದಗಳು ಮತ್ತು ರೈತರ ಹಕ್ಕುಗಳ ಸಂರಕ್ಷಣಾ ಪ್ರಾಧಿಕಾರ'ದಿಂದ 'ಪೇಟೆಂಟ್' ಹಕ್ಕು ಸ್ವಾಮ್ಯ ದೊರೆತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ವಿಶ್ರಾಂತ ಉಪ ಕುಲಪತಿ, ನಾರಾಯಣಗೌಡ ಮಾತನಾಡಿ, ತೂಬಗೆರೆ ಹಲಸಿನ ಹಣ್ಣುಗಳಲ್ಲಿರುವ ಔ 'ಧೀಯ ಗುಣ, ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು, ಸಂಶೋಧನೆ ನಡೆಯುತ್ತಿದೆ. ಪೇಟೆಂಟ್ ಪಡೆದ ರೈತರು, ತಮ್ಮ ತಳಿಗಳನ್ನು ಜವಾಬ್ದಾರಿಯಿಂದ ಸಂರಕ್ಷಿಸಬೇಕು ಎಂದರು.

<><><>

ಕಂದಾಯ ಇಲಾಖೆಯ, ಹಳೇ ದಾಖಲೆಗಳನ್ನು, ಜೂನ್ ತಿಂಗಳಿನಿಂದ, www.recordroom.karnataka.gov.in ಜಾಲತಾಣದ ಮೂಲಕ, ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗೆ, ಪಡೆಯಬಹುದು ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ದಾವಣಗೆರೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಂದಾಯ ಇಲಾಖೆ ಪ್ರಗತಿಯನ್ನು, ಸಚಿವರು ಪರಿಶೀಲಿಸಿದರು. ಪಾರದರ್ಶಕತೆ ತರಲು, ಸಾರ್ವಜನಿಕರು ದಾಖಲೆಗಳನ್ನು ಪಡೆಯಲು, ಅಲೆದಾಡದಂತೆ, 'ಸಕಾಲ' ಮಾದರಿಯಲ್ಲಿ, ಅವಶ್ಯಕ ದಾಖಲೆ ಪಡೆಯಬಹುದು, ಎಂದರು.

<><><>

ಧಾರವಾಡ ಘರಾಣೆಯ, ಸಿತಾರ ರತ್ನ ರಹಿಮತ್ ಖಾನ ಅವರ ಸುಪುತ್ರ, ಸಿತಾರ ನವಾಜ್ ಪ್ರೊಫೆಸರ್ ಅಬ್ದುಲ್ ಕರೀಮ್ ಖಾನ್ ಅವರ ಸಂಸ್ಮರಣೆಯಲ್ಲಿ, ಸಿತಾರರತ್ನ ಸಮಿತಿ, ಇಂದಿನಿಂದ ಮೂರು ದಿನಗಳ ಕಾಲ, 'ಪರಂಪರಾ ಸಂಗೀತೋತ್ಸವ' ಆಯೋಜಿಸಿದೆ. ಆಲೂರು ವೆಂಕಟರಾವ ಸಭಾಭವನದಲ್ಲಿ, ಪ್ರತಿ ದಿನ ಸಂಜೆ 5.30 ರಿಂದ, ರಾಷ್ಟ್ರದ ಖ್ಯಾತನಾಮ ಸಂಗೀತ ಕಲಾವಿದರಿಂದ, ಸಂಗೀತ ಕಛೇರಿಗಳು ಜರುಗಲಿವೆ ಎಂದು, ಹಿರಿಯ ಸಂಘಟಕ ರಾಘವೇಂದ್ರ ಆಯಿ, ತಿಳಿಸಿದ್ದಾರೆ.

<><><>

ಇಂದು ಸಂಜೆ 5.30ಕ್ಕೆ, ಪುಣೆಯ ಸೌರಭ ನಾಯಕ ಅವರಿಂದ ಗಾಯನ, ಬಳಿಕ, ಕೋಲ್ಕತ್ತಾದ ಅನಿಕೇತ ಚಕ್ರವರ್ತಿ ಸರೋದ ವಾದನ ಪ್ರಸ್ತುತ ಪಡಿಸಲಿದ್ದಾರೆ ಎಂದು, ಮೊಹಸೀನ್ ಖಾನ್ ಹಾಗೂ ಅಬ್ದುಲ್ ಖಾನ್ ಮಾಹಿತಿ ನೀಡಿದರು.

<><><>

ಭಾರತೀಯ ಸೇನೆ, 'ಆಪರೇಷನ್ ಸಿಂಧೂರ್' ಮೂಲಕ, ಇಡೀ ವಿಶ್ವಕ್ಕೆ ಭಾರತದ ಪ್ರಾಬಲ್ಯ ತೋರಿ, ಸೈ ಎನಿಸಿಕೊಂಡಿದೆ ಎಂದು, ಕೇಂದ್ರ ಸಚಿವ, ಪ್ರಲ್ಹಾದ ಜೋಶಿ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. 'ರಾಷ್ಟ್ರ ರಕ್ಷಣೆ' ಹೊಣೆ ಹೊತ್ತ, ದೇಶದ ಸೈನಿಕರನ್ನು ಅಭಿನಂದಿಸಲು, ಇಂದು ಬೆಳಗ್ಗೆ 8 ಗಂಟೆಗೆ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ಮೈದಾನದಿಂದ, 'ತಿರಂಗಾ ಯಾತ್ರೆ' ಆಯೋಜಿತವಾಗಿದೆ. ಸಾವಿರಾರು ಜನ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದಾರೆ, ಎಂದರು.

<><><>

ದಕ್ಷಿಣಕನ್ನಡ ಜಿಲ್ಲೆಯ, ಸೌಥ್ ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ – ಎಸ್.ಸಿ.ಡಿ.ಸಿ.ಸಿ ಬ್ಯಾಂಕ್, ಭಾರತೀಯ ಸೈನಿಕರ ಕಲ್ಯಾಣ ನಿಧಿಗೆ, 3 ಕೋಟಿ ರೂಪಾಯಿ ದೇಣಿಗೆ ನೀಡಿದೆ. ಸಂಸ್ಥೆಯ ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ರಾಜೇಂದ್ರ ಕುಮಾರ ಧ್ವನಿ 30 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಪಾಕಿಸ್ಥಾನ ಆಕ್ರಮಿತ ಕಾಶ್ಮೀರದಲ್ಲಿರುವ, ಭಯೋತ್ಪಾದಕ ಅಡಗುತಾಣಗಳ ಮೇಲೆ, ಭಾರತೀಯ ಸೇನೆ ಕೈಗೊಂಡ, ನಿರ್ಣಾಯಕ ಸೈನ್ಯ ಕಾರ್ಯಾಚರಣೆ, 'ಆಪರೇ ’ನ್ ಸಿಂಧೂರ್'ಗಾಗಿ, ಅಭಿನಂದಿಸಲು, ಬೆಂಗಳೂರಿನಲ್ಲಿ 'ತಿರಂಗಾ ಯಾತ್ರೆ' ನಡೆಸಲಾಯಿತು.

<><><>

'ಆಪರೇ ’ನ್ ಸಿಂಧೂರ: ಭಾರತದ ಸೇನೆಯೊಂದಿಗೆ, ರಾಷ್ಟ್ರದ ರಕ್ಷಣೆಗಾಗಿ ನಾಗರಿಕರು' ಯಾತ್ರೆಯಲ್ಲಿ ಪಾಲ್ಗೊಂಡಿದ್ದ, ಹಿರಿಯ ನಾಗರಿಕರಾದ ಶಿವಮ್ಮ, ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

<><><>

ಹಿರಿಯ ನಾಗರಿಕರಾದ ಶಿವಮ್ಮ ಧ್ವನಿ 25 ಸೆಕೆಂದುಗಳು

<><><>

ಆಪರೇ ’ನ್ ಸಿಂಧೂರ್ ಬಳಿಕ, ದೇಶಾದ್ಯಂತ ಜನ, ಭಾರತೀಯ ಸೇನೆಗೆ ನೈತಿಕ ಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರಿನಲ್ಲಿ ಆಯೋಜಿತ, ತಿರಂಗಾ ಯಾತ್ರೆಯಲ್ಲಿ, ಪಾಲ್ಗೊಂಡಿದ್ದ ನಿವೃತ್ತ ಸೇನಾಧಿಕಾರಿ, ಮೇಜರ್ ಗಣಪತಿ ಹೆಗಡೆ, ತಮ್ಮ ಅನಿಸಿಕೆ ಹಂಚಿಕೊಂಡಿದ್ದು, ಹೀಗೆ..

<><><>

ಮೇಜರ್ ಗಣಪತಿ ಹೆಗಡೆ ಧ್ವನಿ 45 ಸೆಕೆಂದುಗಳು

<><><>

ಭಾರತೀಯ ವಾಯು ಸೇನೆಯ ವಿಶ್ರಾಂತ, ಏರ್ ಕಮೋಡೋರ್, ಹುಬ್ಬಳ್ಳಿಯ ಚಂದು ಹವಾಲ್ದಾರ್ ಅವರು, ಪ್ರದೇಶ ಸಮಾಚಾರಕ್ಕಾಗಿ, 'ಆಪರೇಷನ್ ಸಿಂಧೂರ್' ಕುರಿತು ಮಾಹಿತಿ ನೀಡಿದ್ದಾರೆ.

<><><>

ಏರ್ ಕಮೋಡೋರ್ ಸಿ.ಎಸ್. ಹವಾಲ್ದಾರ ಧ್ವನಿ 45 ಸೆಕೆಂದುಗಳು

<><><>

'ಖೇಲೋ ಇಂಡಿಯಾ ಯುವ ಕ್ರೀಡಾಕೂಟ 2025', ಬಿಹಾರ ಪಾಟ್ನಾದ ಕಂಕರ್‌ಬಾಗ್‌ನ, ಪಾಟಲಿಪುತ್ರ ಕ್ರೀಡಾ ಸಂಕೀರ್ಣದಲ್ಲಿ, ವರ್ಣರಂಜಿತ ಸಮಾರಂಭದೊಂದಿಗೆ, ಸಮಾರೋಪಗೊಂಡಿತು. ಕೇಂದ್ರದ ಯುವ ವ್ಯವಹಾರ ಮತ್ತು ಕ್ರೀಡಾ ಖಾತೆ ರಾಜ್ಯ ಸಚಿವರಾದ, ರಕ್ಷಾ ಖಡ್ಸೆ, ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಸೇರಿದಂತೆ, ಹಲವು ಗಣ್ಯರು ಪಾಲ್ಗೊಂಡಿದ್ದರು. ಕರ್ನಾಟಕ 17 ಚಿನ್ನ, 26 ಬೆಳ್ಳಿ, 15 ಕಂಚು ಸೇರಿ, ಒಟ್ಟು 58 ಪದಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಅಂತಿಮ ದಿನವಾದ ನಿನ್ನೆ, ಬಾಸ್ಕೆಟ್ ಬಾಲ್ ಅಂತಿಮ ಪಂದ್ಯದಲ್ಲಿ, ಕರ್ನಾಟಕ ಬಾಲಕಿಯರ ತಂಡ, ಹರಿಯಾಣ ತಂಡವನ್ನು ಸೋಲಿಸಿ, ಚಿನ್ನದ ಪದಕ ಗಳಿಸಿತು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹಾಸನ ನಗರದ ವಿವಿಧೆಡೆ, ಉಪ ಲೋಕಾಯುಕ್ತ, ನ್ಯಾಯಮೂರ್ತಿ, ಕೆ.ಎನ್. ಫಣೀಂದ್ರ ನೇತೃತ್ವದ ಅಧಿಕಾರಿಗಳ ತಂಡ, ಭೇಟಿ ನೀಡಿ ಪರಿಶೀಲಿಸಿತು.

<><><>

ಉತ್ತರ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಇಂದಿನಿಂದ 19ರ ವರೆಗೆ, 'ಐಮ್ಯಾಕ್ಸ್ ಹುಬ್ಬಳ್ಳಿ ಪ್ರದರ್ಶಿನಿ', ಕಲ್ಲೂರ ಲೇಔಟ್‌ನಲ್ಲಿ ಜರುಗಲಿದೆ. ಸಚಿವರಾದ ಎಂ.ಬಿ.ಪಾಟೀಲ ಹಾಗೂ ಸಂತೋಷ ಲಾಡ, ಇಂದು ಸಂಜೆ 6 ಗಂಟೆಗೆ, ಉದ್ಘಾಟಿಸಲಿದ್ದಾರೆ.

<><><>

ಯು.ಜಿ. ಸಿ.ಇ.ಟಿ. –20'25, ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, ಕ್ರೀಡಾ ಮೀಸಲಾತಿ ಅಡಿ, ಇಂದಿನಿಂದ 20ರ ವರೆಗೆ, ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ, ಬೆಂಗಳೂರಿನ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಚೇರಿಯಲ್ಲಿ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕರ್ನಾಟಕದಲ್ಲಿ, 45 ಸಾವಿರ ಕೋಟಿ ರೂಪಾಯಿ, ರೇಲ್ವೆ ಯೋಜನೆಗಳು, ಕಳೆದೊಂದು ದಶಕದಲ್ಲಿ, ಕೇಂದ್ರದಿಂದ ಕಾರ್ಯಗತ.
- ದೊಡ್ಡಬಳ್ಳಾಪುರದ, ತೂಬಗೆರೆಯ ವಿಶಿಷ್ಟ ಹಲಸು ತಳಿಗಳಿಗೆ, ಹಕ್ಕು ಸ್ವಾಮ್ಯ ಪ್ರಾಪ್ತಿ.
- 'ಆಪರೇ ್ನ್ ಸಿಂಧೂರ್': ಭಾರತೀಯ ಸೇನಾ ಪಡೆಗಳನ್ನು ಅಭಿನಂದಿಸಲು, 'ತಿರಂಗಾ ಯಾತ್ರೆ'.
- ಧಾರವಾಡ ಘರಾಣೆಯ, ಸಿತಾರ ನವಾಜ್, ಅಬ್ದುಲ್ ಕರೀಮ್ ಖಾನ್ ಸಂಸ್ಮರಣೆ; ಇಂದಿನಿಂದ 'ಪರಂಪರಾ ಸಂಗೀತೋತ್ಸವ'.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>